E-mail : academic.pg@kud.ac.in
Website: kud.ac.in

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ -580003

KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ

No.KU/Aca/P.G./Adm/2023-24/ 44 Date : 11-11-2023

# ಸುತ್ತೋಲೆ

ವಿಷಯ:ಸನ್ 2023–24ನೇ ಸಾಲಿನ ಮೂರು ರೌಂಡ್‌ಗಳ ಕೌನ್ಸಲಿಂಗ್ ಪ್ರಕ್ರಿಯೆ ನಂತರವು ಸ್ನಾತಕೋತ್ತರ ವಿವಿಧ ವಿಷಯಗಳಲ್ಲಿ ಖಾಲಿ ಉಳಿದ ಸೀಟುಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ:1. No.KU/Aca/P.G./Adm/2023-24/ 216 Date: 15.09.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11-11-2023

ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2023–24ನೇ ಸಾಲಿನ ಎಲ್ಲ ಸ್ನಾತಕೋತ್ತರ ಪದವಿಗಳ ಮೂರು ರೌಂಡ್‌ಗಳ ಕೌನ್ಸಲಿಂಗ್ ಪ್ರಕ್ರಿಯೆ ಮುಗಿದ ನಂತರವೂ ಸೀಟುಗಳು ಖಾಲಿ ಉಳಿದಲ್ಲಿ, ಅಂತಹ ವಿಭಾಗಗಳ ಕೊನೆಯ ಸುತ್ತಿನ ಕೌನ್ಸಲಿಂಗ್ ಮುಗಿದ ಮೂರು ದಿನಗಳೊಳಗಾಗಿ ಖಾಲಿ ಸೀಟುಗಳನ್ನು ಮೆರಿಟ್ ಕಮ್ ರೊಸ್ಟರ್ ಆಧಾರ ಮೇಲೆ ಭರ್ತಿಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಮುಂದುವರೆದು, ಸ್ನಾತಕೋತ್ತರ ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳಿಗೆ ಪ್ರವೇಶ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ:27.11.2023ರವರೆಗೆ ನಿಗದಿಪಡಿಸಲಾಗಿದೆ. ಸದರ ಸ್ನಾತಕೋತ್ತರಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಮೇರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ದಿನಾಂಕ:29.11.2023ರೊಳಗಾಗಿ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವುದು.

ಹೊರವಿಶ್ವವಿದ್ಯಾಲಯ ಹಾಗೂ ಹೊರ ರಾಜ್ಯದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳುದಿ:30.12.2023ರೊಳಗಾಗಿ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣಪತ್ರ (Eligibillity Certificate)ಪಡೆಯುವುದು ಕಡ್ಡಾಯವಾಗಿರುತ್ತದೆ. ಅರ್ಹತಾ ಪ್ರಮಾಣಪತ್ರ (Eligibillity Certificate) ಪಡೆಯದಿದ್ದಲ್ಲಿ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಲಾಗುವುದು.

ಕುಲಸಚಿವರು

ಪ್ರತಿಯನ್ನು ಸಾದರಪೂರ್ವಕವಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ :

1. ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಆಡ್ವಾನ್ಸ್ ಡಿಪ್ಲೋಮಾ/ಸರ್ಟಿಫಿಕೇಟ್ (ಸೆಮಿಸ್ಟರ್/ನಾನ್ ಸೆಮಿಸ್ಟರ್) ಕೋರ್ಸುಗಳ ಅಧ್ಯಕ್ಷರು/ಆಡಳಿತಾಧಿಕಾರಿಗಳು ಕೋ–ಆರ್ಡಿನೇಟರುಗಳು ಕಾರವಾರ/ಗದಗ ಕ.ವಿ.ವಿ ಧಾರವಾಡ.
2. ಕುಲಸಚಿವರು (ಮೌಲ್ಯಮಾಪನ) ಕ.ವಿ.ವಿ ಧಾರವಾಡ.
3. ವಿತ್ತಾಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ. ಧಾರವಾಡ.

ಪ್ರತಿ :

1. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
2. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.
3. ಆಪ್ತ ಕಾರ್ಯದರ್ಶಿಗಳು ಹಣಕಾಸು ಅಧಿಕಾರಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.